ವಿಜಯ ಕರ್ನಾಟಕ

### ಅಂತರ್ ವಿಶ್ವವಿದ್ಯಾಲಯ ಈಜು ಚಾಂಪಿಯನ್‌ಷಿಪ್

# ಬಂಗಾರಕ್ಕೆ ಮುತ್ತಿಟ್ಟ ಮೀನಾಕ್ಷಿ




**ವಿಕ ಸುದ್ದಿಲೋಕ** ಬೆಂಗಳೂರು

ಶ್ರೇಷ್ಠ ಪ್ರದರ್ಶನ ನೀಡಿದ ಬೆಂಗಳೂರು ಜೈನ್ ವಿಶ್ವವಿದ್ಯಾಲಯದ ವಿಕೆಆರ್ ಮೀನಾಕ್ಷಿ ಕನಕಪುರದ ಜೈನ್ ವಿಶ್ವವಿದ್ಯಾಲಯದ ಗ್ಲೋಬಲ್ ಕ್ಯಾಂಪಸ್‌ನಲ್ಲಿ ನಡೆಯುತ್ತಿರುವ ಅಖಿಲ ಭಾರತ ಅಂತರ್ ವಿಶ್ವವಿದ್ಯಾಲಯದ ಈಜು ಚಾಂಪಿಯನ್‌ಷಿಪ್‌ನಲ್ಲಿ ಚಿನ್ನದ ಪದಕ ಗೆದ್ದರು.

ಸೋಮವಾರ ನಡೆದ ಮಹಿಳೆಯರ 400ಮೀ. ಮೆಡ್ಲೆ ವಿಭಾಗದಲ್ಲಿ ಮೀನಾಕ್ಷಿ 5.21.13ಸೆ.ಗಳಲ್ಲಿ ಮೊದಲಿಗರಾಗಿ ಗುರಿ ಮುಟ್ಟುವ ಮೂಲಕ ಚಿನ್ನಕ್ಕೆ ಕೊರಳೊಡ್ಡಿದರು. ಇದೇ ವಿಶ್ವವಿದ್ಯಾಲಯದ ಪೂರ್ವ ಕಿರಣ್ ಶೆಟ್ಟಿ ಮತ್ತು ಕೋಲ್ಕೊತಾ ವಿಶ್ವವಿದ್ಯಾಲಯದ ಅಂಜನಾ ಮೋಹನ್ ಕ್ರಮವಾಗಿ (5.41.35ಸೆ.) ಮತ್ತು (5.43.56ಸೆ.)ಗಳಲ್ಲಿ ಎರಡು ಮತ್ತು ಮೂರನೇ ಸ್ಥಾನದೊಂದಿಗೆ ಬೆಳ್ಳಿ ಹಾಗೂ ಕಂಚಿನ ಪದಕ ತಮ್ಮದಾಗಿಸಿಕೊಂಡರು.

ಮಹಿಳೆಯರ 800ಮೀ. ಫ್ರೀಸ್ಟೈಲ್ ವಿಭಾಗದಲ್ಲಿ ಬೆಂಗಳೂರಿನ ಆರ್‌ಜಿಯುಎಚ್ ಎಸ್ ವಿವಿಯ ಟಿ.ಸ್ನೇಹ 9.59.00ಸೆ.ಗಳಲ್ಲಿ ಮೊದಲ ಸ್ಥಾನದೊಂದಿಗೆ ರಜತ ಪದಕ ಗೆದ್ದರೆ, ಬೆಂಗಳೂರು ವಿವಿಯ ಪ್ರತಿಮಾ ಕೊಲ್ಲಾಳಿ (10.03.46ಸೆ.) ಮತ್ತು ಬೆಂಗಳೂರು ಜೈನ್ ವಿವಿಯ ಪೂರ್ವ ಕಿರಣ್ ಶೆಟ್ಟಿ (10.24.12ಸೆ.) ಎರಡು ಮತ್ತು ಮೂರನೇ ಸ್ಥಾನ ಪಡೆದು ಕ್ರಮವಾಗಿ ಬೆಳ್ಳಿ ಮತ್ತು ಕಂಚಿನ ಪದಕ ಗೆದ್ದುಕೊಂಡರು. ಒಂದೇ ದಿನ ಎರಡು ಪದಕ ಗೆದ್ದ ಪೂರ್ವ ಪದಕ ಬೇಟೆಯನ್ನು ಮುಂದುವರಿಸಿದರು.

ಪುರುಷರ 400ಮೀ. ಮೆಡ್ಲೆ ವಿಭಾಗದಲ್ಲಿ ಬೆಳಗಾವಿ ವಿಟಿಯುನ ಎಂ.ಅರವಿಂದ್ 4.45.86ಸೆ.ಗಳಲ್ಲಿ ಅಗ್ರ ಸ್ಥಾನದೊಂದಿಗೆ ಚಿನ್ನದ ಪದಕ ತಮ್ಮದಾಗಿಸಿಕೊಂಡರು.